ವಿಶ್ವಬ್ಯಾಂಕ್‌ನಿಂದ ಬಂದಂಥ ನೆರವು ಎಷ್ಟು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ವಿಶ್ವಬ್ಯಾಂಕಿನಿಂದ 1978ರಿಂದ 86ರವರೆಗೆ ಸುಮಾರು 117 ಮಿಲಿಯನ್ ಡಾಲರ್ ಬಂದಿದೆ. ಅದನ್ನು ನಾವು ಸಂಪೂರ್ಣವಾಗಿ ಬಳಸಿಕೊಂಡಿದ್ದೇವೆ. 1989ರ ಅಗ್ರಿಮೆಂಟ್ ಪ್ರಕಾರ 96ರವರೆಗೆ 325 ಮಿಲಿಯನ್ ಡಾಲರ್ ಅವರು ನಮಗೆ ಕೊಡಬೇಕೆಂದು ಹೇಳಿ ಒಪ್ಪಂದವಾಗಿದೆ. ಅದನ್ನು ಈಗ ನಾವು ಖರ್ಚು ಮಾಡುತ್ತಿದ್ದೇವೆ.

ಶ್ರೀ ಜಿ. ರಾಜುಗೌಡ : ಎರಡು ಸಾವಿರ ವರ್ಷದ ಒಳಗೆ ಬಚಾವತ್ ಅವಾರ್ಡ್ ಪ್ರಕಾರ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಸರ್ಕಾರಕ್ಕೆ ಸಾಮರ್ಥ್ಯವಿದೆಯೆ? ಆಯವ್ಯಯದಲ್ಲಿ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೆ?

ಶ್ರೀ ಎಸ್. ಎಂ. ಕೃಷ್ಣ : ಸದನದ ಒಟ್ಟಾರೆ ಅಭಿಪ್ರಾಯ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ನೀರನ್ನು ಗುರುತಿಸಿದ್ದಾರೆ ಆ ನೀರು ಎಲ್ಲವನ್ನು ಉಪಯೋಗಿಸಿಕೊಳ್ಳಬೇಕು ಎನ್ನತಕ್ಕದ್ದು ಸರ್ಕಾರದ ನಿರ್ಧಾರ ಹಾಗೂ ಈ ಸದನದ ಒಟ್ಟಾರೆ ನಿರ್ಧಾರ. ಅದಕ್ಕಾಗಿ ಇಂತಹ ಒಂದು ದೊಡ್ಡ ಬೃಹತ್ ಪ್ರಮಾಣದಲ್ಲಿ ಕಾರ್ಯ ಕೈಗೆತ್ತಿಕೊಂಡಾಗ ಪ್ರಾಮುಖ್ಯವಾಗಿ ನಮಗೆ ಬರತಕ್ಕಂಥ ಅಡ್ಡಿ ಆತಂಕಗಳು ಏನು ಎಂದರೆ ಅದಕ್ಕೆ ಬೇಕಾಗುವಂಥ ಸಂಪನ್ಮೂಲಗಳನ್ನು ಒದಗಿಸಿಕೊಡತಕ್ಕದ್ದು. ಈ ಸಂಪನ್ಮೂಲಗಳನ್ನು ಒದಗಿಸಿಕೊಡತಕ್ಕ ಭೂಮಿಗೆ ಸನ್ನಿವೇಶ ಸಿದ್ಧವಾದರೆ ನಮ್ಮಲ್ಲಿ ಇರತಕ್ಕ ಇಂಜಿನಿಯರಿಂಗ್ ಪರಿಣತಿ ಏನಿದೆ, ಮ್ಯಾನ್‌ಪವರ್ ಏನು ಇದೆ ಮತ್ತು ಅದಕ್ಕೆ ಬೇಕಾಗುವಂಥ ಇಕ್ವಿಪ್‌ಮೆಂಟ್ಸ್ ಮೆಶೀನ್‌ಗಳು. ಇವುಗಳು ಏನು ಬೇಕು. ಅವೆಲ್ಲವೂ ಇವೆ. ನಾವು ಪ್ರೊಕ್ಯೂರ್ ಮಾಡಿಕೊಳ್ಳಬಹುದು ಮತ್ತು ನಮ್ಮ ಮ್ಯಾನ್‌ಪವರನ್ನು ಈ ಒಂದು ಉದ್ದೇಶಕ್ಕೆ ನಾವು ಅದನ್ನು ಚೌಕಟ್ಟಿಗೆ ತರಬಹುದು. ಪ್ರಧಾನವಾಗಿರುವುದು ಸಂಪನ್ಮೂಲಗಳು. ಆ ಸಂಪನ್ಮೂಲಗಳು ನಮಗೆ ದೊರಕುವ ಗತಿಯ ಮೇಲೆ ನಮ್ಮ ಮಹಾ ಪ್ರಯತ್ನ ನಿರ್ಧಾರವಾಗುತ್ತದೆ.

ವಿಷಯ : ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಮಂಜೂರಾತಿ.

Q : 1279

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ಒಂದು ತಿಂಗಳೊಳಗಾಗಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಭರವಸೆ ನೀಡಿದ ಪ್ರಕಾರ ಮಂಜೂರಾತಿ ಪಡೆಯಲಾಗಿದೆಯೇ?

ಭರವಸೆ ಕೊಟ್ಟ ನಂತರ ಇಲ್ಲಿಯವರೆಗೆ ಈ ಬಗ್ಗೆ ಮಾಡಿರುವ ಪ್ರಗತಿ ಏನು?

ಆ) ಈ ಯೋಜನೆಯನ್ನು ಕಾರ್ಯಗತ ಮಾಡಲು ಪ್ರತ್ಯೇಕ ತಾಂತ್ರಿಕ ಸಿಬ್ಬಂದಿಯನ್ನು ನೇಮಿಸಲಾಗಿದೆಯೇ. ಇವರಗಳ ಕಾರ್ಯವ್ಯಾಪ್ತಿ (ಅವರ ಹುದ್ದೆ ಹಾಗೂ ಹೆಸರುಗಳನ್ನು ಮತ್ತು ಸ್ಥಳಗಳನ್ನು ತಿಳಿಸುವುದು ವಿವರಣೆ ನೀಡುವುದು).

ಇ) ಈ ಯೋಜನೆಗಾಗಿ ಪ್ರತ್ಯೇಕವಾಗಿ ನೇಮಿಸಿರುವ ಸಿಬ್ಬಂದಿಯ ವಾರ್ಷಿಕ ವೆಚ್ಚ ಎಷ್ಟು (ಸಂಪೂರ್ಣ ವಿವರಣೆ ನೀಡುವುದು).

ಈ) ಈ ಯೋಜನೆಗಾಗಿ ಪ್ರತ್ಯೇಕವಾಗಿ ನೇಮಿಸಿರುವ ಇಲಾಖೆಯ ತಜ್ಞರು ಈ ಯೋಜನೆಯ ಬಗ್ಗೆ ಈವರೆಗೆ ಕಾರ್ಯಗತ ಮಾಡಿರುವ ಮತ್ತು ಮಾಡುತ್ತಿರುವ ಕಾರ್ಯಗಳೇನು?

ಉ) ರಾಜ್ಯದ 1993-94ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಯ ಕಾರ್ಯಗತ ಮಾಡಲು ಒದಗಿಸಿದ ಹಣವೆಷ್ಟು ಹಾಗೂ ಈ ಯೋಜನೆಯ ಅಂದಾಜು ಮೊತ್ತವೆಷ್ಟು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಕೇಂದ್ರ ಸರ್ಕಾರದ ಅನುಮತಿ ಇನ್ನೂ ದೊರೆತಿಲ್ಲ. ಯೋಜನೆಯ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ 1991ರಲ್ಲಿ ಕಳುಹಿಸಿಕೊಡಲಾಗಿದ್ದು, ಸದರಿ ಆಯೋಗವು ಹಲವಾರು ತಾಂತ್ರಿಕ ವಿಷಯಗಳ ಬಗ್ಗೆ ಆಗಸ್ಟ್ 1991ರಿಂದ ಡಿಸೆಂಬರ್ 92ರವರೆಗೆ ಕಂತುಗಳಲ್ಲಿ ವಿವರಗಳನ್ನು ಕೇಳಿದ್ದು, ಈ ಬಗ್ಗೆ ಹಲವು ವಿವರಗಳನ್ನು ಮಾರ್ಚ್ 1992, ಜನವರಿ 1993 ಮತ್ತು ಫೆಬ್ರವರಿ 1993ರಲ್ಲಿ ಕಳುಹಿಸಿಕೊಡಲಾಗಿದೆ. ಉಳಿದ ವಿವರಗಳ ಬಗ್ಗೆ ಸಂಬಂಧಪಟ್ಟ ಇತರ ಇಲಾಖೆಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಆ) (ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನೀಡಲಾಗಿದೆ).

ಇ) ಏರಿಯಲ್ಸ್ ಸರ್ವೆ ಕೆಲಸ ಪೂರ್ಣಗೊಳ್ಳುತ್ತಿದೆ. ಮುಳುಗಡೆ ಪ್ರದೇಶದ ಸರ್ವೆ ಕೆಲಸ, ಮೊದಲನೇ 10 ಕಿ.ಮೀ. ಭಾಗದ ಸರ್ವೆ, ನಕಾಶೆ ಮತ್ತು ಅಂದಾಜು ಪಟ್ಟಿಗಳ ತಯಾರಿಕೆ ಪ್ರಗತಿಯಲ್ಲಿದೆ. ಇದ್ದಲ್ಲದೆ ರಾಣೆಬೆನ್ನೂರು ಹಾಗೂ ಹಾವೇರಿಯಲ್ಲಿನ ಈ ಯೋಜನೆಯ ಕಾಲೋನಿಗೆ ಭೂ ಸ್ವಾಧೀನ ಕಾರ್ಯ ಕೊನೆಯ ಹಂತದಲ್ಲಿದೆ.

ಈ) ಈ ಯೋಜನೆಗೆ 1993-94ನೇ ಸಾಲಿನ ಆಯವ್ಯಯದಲ್ಲಿ 5.00 ಕೋಟಿ ರೂ.ಗಳ ಅನುದಾನವನ್ನು ನೀಡಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ವಿವರ	ಮುಖ್ಯ ಇಂಜಿನಿಯರ್ ಅವರ ಕಛೇರಿ	ಕಾರ್ಯಪಾಲಕ ಇಂಜಿನಿಯರ್ ಅವರ ಕಛೇರಿ	ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅವರ ಕಛೇರಿ
1.	ಕಛೇರಿ ವಿಳಾಸ	ಮುಖ್ಯ ಇಂಜಿನಿಯರ್, ತುಂಗಾ	ಕಾರ್ಯಪಾಲಕ ಇಂಜಿನಿಯರ್ ತುಂಗಾ	ಅ) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನೆ

	ಮೇಲ್ದಂಡೆ ಯೋಜನೆ ಶಿವಮೊಗ್ಗ.	ಮೇಲ್ದಂಡೆ ಯೋಜನೆ ವಿಭಾಗ ರಾಣೆಬೆನ್ನೂರು.	ಉಪವಿಭಾಗ, ರಾಣೆಬೆನ್ನೂರು. ಆ) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ತುಂಗಾ ಮೇಲ್ದಂಡೆ ಯೋಜನೆ ಉಪ ವಿಭಾಗ, ಹಾವೇರಿ. ಇ) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ತುಂಗಾ ಮೇಲ್ದಂಡೆ ಯೋಜನೆ ಉಪ ವಿಭಾಗ, ಗಾಜನೂರು.
2. ಅಧಿಕಾರಿಯ ಹೆಸರು :	ಶ್ರೀ ಕೆ. ಶಿವಶಂಕರ, ಮುಖ್ಯ ಇಂಜಿನಿಯರ್	ಶ್ರೀ ಎಸ್.ಎಸ್. ಭಾಸ್ಕರ್, ಕಾರ್ಯಪಾಲಕ ಇಂಜಿನಿಯರ್.	ಸ.ಕಾ. ಇಂಜಿನಿಯರುಗಳು: ಅ) ಶ್ರೀ ಕೆ. ಹಾಲಪ್ಪ ಆ) ಶ್ರೀ ಎಸ್. ಸಿದ್ಧರಾಮಪ್ಪ ಇ) ಶ್ರೀ ಡಿ.ಆರ್. ಕೃಷ್ಣಮೂರ್ತಿ
3. ವಾರ್ಷಿಕ ವೆಚ್ಚ (ರೂ.ಗಳಲ್ಲಿ)	(1-4-1992 ರಿಂದ 31-1-1993ರವರೆಗೆ)	11,07,386	ಅ) 9, 18, 267. ಆ) 7, 04, 493. ಇ) 7, 68, 541. ಒಟ್ಟು : 34, 98, 687 ರೂಗಳು.

ಶ್ರೀ ಬಿ. ಹೆಚ್. ಬನ್ನಿಕೋಡ್ : ತುಂಗಾ ಮೇಲ್ದಂಡೆ ಯೋಜನೆಗೆ ಒಂದು ತಿಂಗಳೊಳಗಾಗಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹಿಂದಿನ ಅಧಿವೇಶನದಲ್ಲಿ ಹೇಳಿದಂತಹ ಮಾತು. ಆದರೆ ಇಲ್ಲಿ ಬಂದಿರತಕ್ಕಂತಹ ಉತ್ತರ ನೋಡಿದರೆ ಕೇಂದ್ರಸರ್ಕಾರದ ಅನುಮತಿ ಇನ್ನೂ ದೊರೆತಿಲ್ಲ ಎಂದು. ಈ ಯೋಜನೆ 2 ಸಾವಿರ ಇಸವಿಯೊಳಗೆ ಪೂರ್ಣಗೊಳ್ಳುವುದಕ್ಕೆ ಏನು ಹಣಕಾಸು ಬೇಕು ಅದನ್ನು ಕನಿಷ್ಟ 1993-94ರ ಆಯವ್ಯಯದಲ್ಲಿ ಇದಕ್ಕೆ 50 ಕೋಟಿ ರೂಪಾಯಿ ಹಣ ಒದಗಿಸುತ್ತೇವೆ ಎಂದು ಈ ಸದನದಲ್ಲಿ ಹೇಳಿದ್ದರು. ಆದರೆ ಇಲ್ಲಿ 5 ಕೋಟಿ ರೂಪಾಯಿ ಎಂದು ಉತ್ತರ ಬಂದಿದೆ. ಈ ರೀತಿಯಾದರೆ ಹೇಗೆ? ನೀರಾವರಿ ಇಲಾಖೆ ಬಗ್ಗೆ ಕೇಳಿದರೆ ಉಪಮುಖ್ಯಮಂತ್ರಿಗಳು ಏನಾದರೂ ಮಾತನಾಡುತ್ತಾರೆ ಎಂದು ನಮಗೆಲ್ಲಾ ಸಂತೋಷ ಇದೆ. ಆದರೆ ನಮಗೆಲ್ಲಾ ಹಣ ಒದಗಿಸಿರಿ ಎಂದು ಕೇಳುತ್ತಿದ್ದಾರೆ. ಅವರು ಏನೆಲ್ಲಾ ಸಹಕಾರ ಕೇಳುತ್ತಾರೆ ಅದಕ್ಕೆಲ್ಲಾ ಬಹುತೇಕ ಈ ಸದನದ ಸರ್ವಸದಸ್ಯರ ಸಮ್ಮತಿ, ಬೆಂಬಲ ಇದೆ. ಮುಖ್ಯಮಂತ್ರಿಗಳು ಹೇಳಿದ ಮೇಲೆ ಇದು ಏಕೆ ಆಗಿಲ್ಲ, ಅನುಮತಿ ದೊರೆತಿಲ್ಲ. ಈ ಉತ್ತರ ನೋಡಿದರೆ ಕೇಂದ್ರ ಸರ್ಕಾರದ ಅನುಮತಿ ದೊರೆಯುವುದು ದೂರವೇ ಉಳಿಯಿತು. ಇನ್ನು ವಿವರಗಳ ಬಗ್ಗೆ ಸಂಬಂಧಪಟ್ಟ

ಇತರ ಇಲಾಖೆಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತದೆ ಎಂದಿದೆ. ಮಾನ್ಯ ಉಪಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು. ಈ ಮಾತು ತಮಗಾದರೂ ಸಂತೋಷ ತರುತ್ತದೆಯೇ? ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ 1991ನೇ ಇಸವಿಯಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ ಎಂದು ಹೇಳುತ್ತಿದ್ದಾರೆ ಮತ್ತು ಇನ್ನೂ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಯವರು ಸಂಗ್ರಹ ಮಾಡುತ್ತಿದ್ದಾರೆ ಎಂದಿದ್ದಾರೆ. ನಾನು ಯಾವ ಭಾಷೆಯಲ್ಲಿ ಹೇಳಿದರೂ ಈ ಸರ್ಕಾರಕ್ಕೆ ಪ್ರಯೋಜನವಾಗಿಲ್ಲ. ಅದಕ್ಕೆ ತಮ್ಮಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡುವುದೇನೆಂದರೆ, ಒಬ್ಬ ವಿಶೇಷಣಾಧಿಕಾರಿಯನ್ನು ನೇಮಿಸಿ ನಾನಾ ಇಲಾಖೆಗಳಿಂದ ಮಾಹಿತಿಯನ್ನು ಸಂಗ್ರಹಿಸಬೇಕು, ಅಗ್ರಿಕಲ್ಚರಲ್, ಫಾರೆಸ್ಟ್, ಎನ್ವಿರಾನ್‌ಮೆಂಟ್, ಹೈಡ್ರಾಲಿಕ್, ಇದಕ್ಕೆಲ್ಲಾ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಬೇಕು. ಇದು 23-3-91ರಲ್ಲಿ ಕೇಂದ್ರಸರ್ಕಾರಕ್ಕೆ ಹೋಗಿದೆ. ಎರಡು ವರ್ಷಗಳಾದರೂ ಇನ್ನೂ ಮಾಹಿತಿ ಸಂಗ್ರಹಿಸುತ್ತಿದ್ದೇವೆ ಎಂದಿದ್ದಾರೆ. ಆದ್ದರಿಂದ ಇದಕ್ಕೆ, ವಿಶೇಷ ಅಧಿಕಾರಿಯನ್ನು ನೇಮಿಸಿ ಎಲ್ಲಾ ಮಾಹಿತಿ ಒದಗಿಸಿ, ಮಂಜೂರಾತಿ ಪಡೆಯಲಿಕ್ಕೆ ತಾವು ವಿಶೇಷ ಪ್ರಯತ್ನ ಮಾಡುತ್ತೀರಾ? ಎರಡನೆಯದಾಗಿ ಶಿವಮೊಗ್ಗ ತಾಲ್ಲೂಕು ಹೊನ್ನಾಳಿ, ರಾಣೆ ಬೆನ್ನೂರು, ಹಿರೇಕೆರೂರು, ಹಾವೇರಿ, ಹಾನಗಲ್ ಈ ಎಲ್ಲಾ ಕ್ಷೇತ್ರಗಳ ಶಾಸಕರಿಗೆ ಸಂಬಂಧಪಟ್ಟಿದ್ದುದು ಅಲ್ಲಿ 2,34,000 ಎಕರೆಗೆ ನೀರಾವರಿಯಾಗುತ್ತದೆ. ಇದಕ್ಕೆ ತಮ್ಮ ಅಧ್ಯಕ್ಷತೆಯಲ್ಲಿ ಶಾಸಕರ ಸಮಿತಿ ಮಾಡಿ ಕನಿಷ್ಟ ತಿಂಗಳಿಗೆ ಒಂದು ಸಾರಿಯಾದರೂ ಇಲ್ಲಿ ಆಗತಕ್ಕಂತಹ ಪ್ರಗತಿಯನ್ನು ಪರಿಶೀಲನೆ ಮಾಡಲಿಕ್ಕೆ, ಅಧಿಕಾರಿಗಳು ಚುರುಕಾಗಿ ಕೆಲಸ ಮಾಡಲಿಕ್ಕೆ ಯೋಜನೆ ಹಾಕಿಕೊಳ್ಳುತ್ತೀರ? ಕೆಲಸ ಪ್ರಗತಿಯಾಗಬೇಕಾದರೆ ಅವಶ್ಯ ಇರತಕ್ಕಂತಹ ತಾಂತ್ರಿಕ ಸಿಬ್ಬಂದಿಯನ್ನು ನೇಮಿಸುತ್ತೀರಾ? ಮತ್ತು ಈ 5 ಕೋಟಿ ರೂಪಾಯಿ ಹಣ ಯಾವುದಕ್ಕೂ ಸಾಲದು, ಅದಕ್ಕೆ ಹೆಚ್ಚಿನ ಹಣವನ್ನು ತಾವು ಏನಾದರೂ ಒದಗಿಸುತ್ತೀರ? ಈ ಕಾರ್ಯವನ್ನು 2000 ಇಸವಿಯೊಳಗೆ ಮುಗಿಸಬೇಕೆಂದು ತಾವು ಏನು ಹೇಳುತ್ತಿದ್ದೀರಿ ಆ ರೀತಿ ಮುಗಿಸಲಿಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತೀರ ಎಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಈ ಯೋಜನೆಗೆ 1990-91ರ ದರಗಳ ಪ್ರಕಾರ 382 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದಕ್ಕೆ ಇನ್ನೂ ಸೆಂಟ್ರಲ್ ವಾಟರ್ ಕಮಿಷನ್‌ರವರ ಒಪ್ಪಿಗೆ ಸಿಕ್ಕಲಿಲ್ಲ ಎಂದು ನಾನು ಉತ್ತರದಲ್ಲಿ ಹೇಳಿದ್ದೇನೆ. ನೀವೂ ಪುನರ್ ಪ್ರತಿಪಾದನೆ ಮಾಡಿದ್ದೀರಿ. ಅವರು ಕಂತುಕಂತಿನಲ್ಲಿ ನಮಗೆ ಕ್ಲಾರಿಫಿಕೇಷನ್ಸ್ ಕೇಳುತ್ತಾರೆ. ನಾವು ಕಂತುಕಂತಿನಲ್ಲಿ ಕ್ಲಾರಿಫಿಕೇಷನ್‌ಗೆ ಉತ್ತರವನ್ನು ಕಳುಹಿಸಿಕೊಡುತ್ತಿದ್ದೇವೆ. ನಮ್ಮ ಮುಖ್ಯಮಂತ್ರಿಯವರಾಗಲಿ, ನಾವಾಗಲಿ, ಮತ್ತೊಬ್ಬರಾಗಲಿ ಹೋದಾಗ ಸೆಂಟ್ರಲ್ ವಾಟರ್ ಕಮಿಷನ್‌ರವರ ಮೇಲೆ ಪ್ರಬಲವಾದಂತಹ ಒತ್ತಾಯವನ್ನು ಹಾಕುತ್ತಿದ್ದೇವೆ. ಈ ಪ್ರಾಜೆಕ್ಟ್‌ಗಳ ಬಗ್ಗೆ ಕ್ಲಿಯರೆನ್ಸ್ ಕೊಡತಕ್ಕಂಥದ್ದನ್ನು ನೀವು ತರದೂದು ಮಾಡಬೇಕು ಎಂದು ಹೇಳಿದ್ದೇವೆ. ಅಷ್ಟೇ ನಮ್ಮಿಂದ ಮಾಡುವುದಕ್ಕೆ ಸಾಧ್ಯ. ಎರಡನೆಯದು ನೀವು ಈ ಕೆಲಸಕ್ಕೆ ವಿಶೇಷ ಅಧಿಕಾರಿಯನ್ನು ನೇಮಿಸಿ ಎಂದು ಹೇಳುತ್ತಿದ್ದೀರಿ. ನೀರಾವರಿ ಇಲಾಖೆಯಲ್ಲಿ ವಿಶೇಷ ಅಧಿಕಾರಿಗಳು ಬಹಳ ಜನ ಇದ್ದಾರೆ. ಒಬ್ಬರನ್ನು ಐಡೆಂಟಿಫೈ ಮಾಡಿ ಅವರು ಬನ್ನಿಕೋಡ್‌ರನ್ನು ಜೊತೆಯಲ್ಲಿ ಸಾಕಾದಷ್ಟು ಕೋ-ಆರ್ಡಿನೇಶನ್ ಮಾಡಿ ಮತ್ತು ಕೇಂದ್ರ ಸರ್ಕಾರದ ಜೊತೆಯಲ್ಲಿ ಕೋ-ಆರ್ಡಿನೇಷನ್ ಮಾಡಿ ಇದಕ್ಕೆ ಆದಷ್ಟು

ಬೇಗ ಸೆಂಟ್ರಲ್ ವಾಟರ್ ಕಮೀಷನ್‌ನಿಂದ ಮಾಡುತ್ತೇವೆ. ಮೂರನೆಯದು, ಈ ಯೋಜನೆಗೆ 50 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಸರ್ಕಾರ ಹೇಳಿದೆ ಎಂದು ಹೇಳಿದಿರಿ. ನನ್ನ ಕೈಯಲ್ಲಿ ಬಜೆಟ್ ಫಿಗರ್ಸ್‌ನ್ನು ಮೇಲೆ ಮೊತ್ತ ಹೋಗುವುದಕ್ಕೆ ಸಾಧ್ಯ. 5 ಕೋಟಿ ರೂಪಾಯಿಯನ್ನು ನಮಗೆ 1993-94ನೇ ಇಸವಿಯಲ್ಲಿ ಒದಗಿಸಿಕೊಟ್ಟಿದ್ದಾರೆ.

11.15 ಎ. ಎಂ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಾವು ಎರಡು ಸಾವಿರ ಇಸವಿಯಲ್ಲಿ ಒಂದು ಹನಿ ನೀರನ್ನು ಬಿಡದೆ ಬಳಸುತ್ತೇವೆ. ಅದಕ್ಕೆ ನಾನು ಉಪಮುಖ್ಯಮಂತ್ರಿಯವರನ್ನು ಕೇಳುತ್ತೇನೆ. ಈ ಯೋಜನೆ ಬಗ್ಗೆ ನಿರ್ದಿಷ್ಟವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡು ಮಂಜೂರಾತಿ ಪಡೆಯಲಿಕ್ಕೆ ಯೋಜನಾ ಇಲಾಖೆಯಿಂದ ಎಲ್ಲಾ ಮಾಹಿತಿಯನ್ನು ತರಿಸಿ ಕೇಂದ್ರಕ್ಕೆ ಒಪ್ಪಿಸಲಿಕ್ಕೆ ವಿಶೇಷ ಅಧಿಕಾರಿಯನ್ನು ನೇಮಿಸುತ್ತೀರಾ? ತಮ್ಮ ಅಧ್ಯಕ್ಷತೆಯಲ್ಲಿ ಶಾಸಕರ ಸಮಿತಿ ಮಾಡಿ ತಿಂಗಳಿಗೆ ಒಂದು ಸಾರಿಯಾದರೂ ಇದರ ಬಗ್ಗೆ ಪರಿಶೀಲನೆ ಮಾಡಿ ಏನು ಪ್ರಗತಿಯಾಗಿದೆ ಎನ್ನುವುದನ್ನು ನೋಡುತ್ತೀರಾ 5 ಕೋಟಿ ರೂಪಾಯಿಗಳು ಕೊಟ್ಟರೆ ಎರಡು ಸಾವಿರ ಇಸವಿಯಲ್ಲಿ ಈ ಯೋಜನೆಯನ್ನು ಮುಗಿಸುವುದಕ್ಕೆ ಸಾಧ್ಯವೆ? ಮತ್ತು ಇನ್ನೂ ಅನೇಕ ಯೋಜನೆಗಳಿಗೆ ಕೇಂದ್ರದಿಂದ ಮಂಜೂರಾತಿ ಸಿಕ್ಕಿಲ್ಲ. ರಾಜ್ಯ ಸರ್ಕಾರ ಈ ಯೋಜನೆಗೆ ಹಣವನ್ನು ಒದಗಿಸಿ ಏಕೆ ಪ್ರಗತಿಯನ್ನು ಮಾಡಬಾರದೆಂದು ಕೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ತಿಂಗಳು ತಿಂಗಳು ಶಾಸಕರ ಸಭೆ ನಡೆಸುವುದು ಸುಲಭ. ಆದರೆ ಅದರಿಂದ ಮಾನ್ಯ ಸದಸ್ಯರು ಏನು ಸುಧಾರಣೆ ಆಗುತ್ತದೆಂದು ಅಪೇಕ್ಷೆ ಮಾಡುತ್ತಾರೆ ಅದನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಮಾನ್ಯ ಸದಸ್ಯರ ಕಳಕಳಿ ನಮಗೂ ಇದೆ. ಕೇಂದ್ರ ಸರ್ಕಾರದಿಂದ ಏನು ಕ್ಲಿಯರೆನ್ಸ್ ಕೊಡಬೇಕು ಅದನ್ನು ದೊರಕಿಸಿಕೊಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ.

Sub : Energy Arrears from Industrialists.

Q : 97

Sri. B. S. Yadiyurappa (Shikaripura) : Will the Deputy Chief Minister be pleased to state?

a) What is the amount of arrears due to be received by K. E. B. from Large and Medium Industrialists in the State?
b) What is the amount of arrears outstanding from various Companies? (Details to be furnished)
c) What is the action taken by the Government for the recovery of arrears outstanding?